**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**
**LAC.No. 160/2018**

ಪಿ.ಡಬ್ಲ್ಯೂ. **1**

ದಿನಾಂಕಃ **24.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

ಪಾಟೀ ಸವಾಲು ಃ 2 ನೇ ಎದುರುದಾರರ ಪರವಾಗಿ ಶ್ರೀ. ಬಿಜೆಎಂ ವಕೀಲರಿಂದ

1. ಸರ್ವೇ ನಂ.128 ರಲ್ಲಿ 24 ಗುಂಟೆ ಜಮೀನು ಭೂ ಸ್ವಾಧೀನವಾಗಿರುತ್ತದೆ. ಉಳಿಕೆ 6 ಎಕರೆ ಜಮೀನು ನನ್ನ ಸ್ವಾಧೀನಾನುಭವದಲ್ಲಿ ಇದ್ದುನಾನು ವ್ಯವಸಾಯ ಮಾಡುತ್ತಿದ್ದೇನೆ. 28 ಮಾವಿನ ಮರ ಸುಮಾರು 20 ವರ್ಷದ್ದು ಇದೆ. . ಈ ಬಗ್ಗೆ ನಾನು ದಾಖಲಾತಿ ಹಾಜರುಪಡಿಸಿಲ್ಲ. ಬಾದಾಮಿ ಮರಗಳು ಎಂದು ರುಜುವಾತುಪಡಿಸಲು ಸಂಬಂಧಿಸಿದ ಇಲಾಖೆಯಿಂದ ನಾನು ದಾಖಲಾತಿ ಪಡೆದು ಹಾಜರುಪಡಿಸಿಲ್ಲ. 1 ನೇ ಎದುರುದಾರರು ಪಾವತಿ ಮಾಡಿರುವ ಪರಿಹಾರ ಸೂಕ್ತ ಮತ್ತು ವೈಜ್ಞಾನಿಕವಾದದ್ದು ಎಂದರೆ ಸರಿಯಲ್ಲ. ಸ್ವಾಧೀನವಾದ ಜಮೀನು ತುಮಕೂರು ಪಟ್ಟಣದಿಂದ 13 ರಿಂದ 14 ಕಿ.ಮೀ ಅಂತರ

ಇದೆ ಎಂದರೆ ಸರಿಯಲ್ಲ ಸಾಕ್ಷಿ 7 ಕಿ.ಮೀ ಅಂತರ ಇದೆ ಎಂದು ನುಡಿದಿರುತ್ತಾರೆ. ರೂ.15,78,394 /- ಗಳನ್ನು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವಾಗಿ ಪಾವತಿ ಮಾಡಿದ್ದು, ರೈಲ್ವೆ ಹಳಿಗಳ ನಿರ್ಮಾಣಕ್ಕಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನವಾಗಿರುವುದರಿಂದ ಹೆಚ್ಚಿನ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಸ್ವಾಧೀನವಾದ ಜಮೀನು ತುಮಕೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಡುತ್ತದೆ ಎಂದು ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಸ್ವಾಧೀನವಾದ ಜಮೀನು ಊರು ಕೆರೆ ಗ್ರಾಮ ಪಂಚಾಯಿುತಿ ವ್ಯಾಪ್ತಿಗೆ ಒಳಪಡುತ್ತದೆ ಎಂದು ಮುಂದುವರಿದು ನುಡಿದಿರುತ್ತಾರೆ.

2. ದಿ.18.11.2017 ರಂದು ಅವಾರ್ಡ್ ನಡವಳಿ ಆದೇಶವಾಗಿರುತ್ತದೆ. ದಿ.22.06.2018 ರಂದು ನಾನು ರೆಫರೆನ್ಸ್ ಅರ್ಜಿ ಸಲ್ಲಿಸಿದ್ದೇನೆ. ನಾನು 1 ನೇ ಎದುರುದಾರರ ಕಚೇರಿಯಲ್ಲಿ ನಿಗಧಿತ ಕಾಲಮಿತಿಯಲ್ಲಿ ರೆಫರೆನ್ಸ್ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಕಾಲಮಿತಿಯಲ್ಲಿ ಅರ್ಜಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು

ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನಖ ತಂದೆ 1 ನೇ ಎದುರುದಾರ ಕಚೇರಿಯಲ್ಲಿ ಕಾಲ ವಿಳಂಬಕ್ಕೆ ಸೂಕ್ತ ಕಾರಣವನ್ನು ನೀಡಿ ಅರ್ಜಿ ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಪಾಟೀ ಸವಾಲು ಃ **1** ನೇ ಎದುರುದಾರ ಪರ ವಕೀಲರು **2** ನೇ ಎದುರುದಾರರ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ ಅನುಮತಿಸಲಾಯಿತು

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು